CW : 18
PW : 11

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.1188/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಶೇಖರ್ ಜಿ. |
| ತಂದೆಯ ಹೆಸರು | : | ಗುರಪ್ಪ ಗೌಡ |
| ಪ್ರಾಯ | : | 51 |
| ಉದ್ಯೋಗ | : | PDO, ತುದೂರು, ತೀರ್ಥಹಳ್ಳಿ |
| ವಾಸಸ್ಥಳ | : | ತೀರ್ಥಹಳ್ಳಿ |
| ದಿನಾಂಕಃ 24.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

2013 ರಿಂದ 2023 ರವರೆಗೆ ಶಿವಮೊಗ್ಗದ ಹೊಸನಗರದ ರಿಪ್ಪನಪೇಟೆ ಗ್ರಾಮಪಂಚಾಯ್ತಿಯಲ್ಲಿ PDO ಆಗಿದ್ದೆನು.

ದಿಃ04.07.2021 ರಂದು ಪುತ್ತೂರು ನಗರ ಠಾಣೆಯವರು ಪವಿತ್ರಾ ಗಂಡಃ ಮಂಜು, ವಾಸಃ ರಿಪ್ಪನಪೇಟೆ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆರವರ ಹೆಸರು ಮತ್ತು ವಾಸದ ದೃಢೀಕರಣವನ್ನು ಕೋರಿ ಪತ್ರ ಬರೆದಿದ್ದು, ದಿಃ06.07.2021 ರಂದು ನಮ್ಮ ದಾಖಲೆಯನ್ನು ಪರಿಶೀಲಿಸಲಾಗಿ ನಮ್ಮ ರಿಪ್ಪನ್ ಪೇಟೆಯ ವ್ಯಾಪ್ತಿಯಲ್ಲಿ ಇರುವುದಿಲ್ಲ ಎಂದು ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು **ನಿಪಿ40** ಎಂದು ಸಾಕ್ಷಿಯ ಸಹಿಯನ್ನು **ನಿಪಿ40(ಎ)** ಎಂದು ಗುರುತಿಸಲಾಯಿತು.

CW : 18
PW : 11

**<u>ಪಾಟಿಸವಾಲು ಆರೋಪಿ ಪರ ಶ್ರೀ. M.K. ವಕೀಲರಿಂದಃ</u>**

ಪೋಲೀಸರು ಕೋರಿಕೆ ಪತ್ರವನ್ನು ಮುದ್ದಾಂ ತಂದುಕೊಟ್ಟಿರುತ್ತಾರೆ. ಟಪಾಲಿನಲ್ಲಿ ಬಂದದ್ದಾ ಅಥವಾ ಮುದ್ದಾಂ ಬಂದದ್ದಾ ಎಂದು ದಾಖಲೆಯಲ್ಲಿ ನಮೂದಿಸಬೇಕು ಎಂದರೆ ಸರಿ. ಆ ರೀತಿ ನಿಪಿ40 ರಲ್ಲಿ ಇಲ್ಲ ಎಂದರೆ ಸರಿ. ಯಾವ ದಾಖಲಾತಿಗಳನ್ನು ನಾನು ಪರಿಶೀಲಿಸಿ ನಿಪಿ40 ನ್ನು ನೀಡಿರುತ್ತೇನೆ ಎಂದು ವಿವರ ಇಲ್ಲ ಮತ್ತು ಸದರಿ ದಾಖಲಾತಿಗಳನ್ನು ಲಗತ್ತಿಸಿರುವುದಿಲ್ಲ ಎಂದರೆ ಸರಿ. ಪೋಲೀಸರ ಕೋರಿಕೆಯ ಮೇರೆಗೆ ಸುಳ್ಳು ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ಪತ್ರವನ್ನು ನೀಡಿರುತ್ತೇನೆ, ಉಪನಿರೀಕ್ಷಕರಿಗೆ ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾರೂ ಕೂಡಾ ದಾಖಲಾತಿಗೆ ಸಹಿ ಮಾಡಿರುವುದಿಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು